# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

## ಸಿ. ಸಿ. ನಂ:325/2015

ಸಿಡಬ್ಲ್ಯು:4
ಪಿಡಬ್ಲ್ಯು:2

| | | |
|---|---|---|
| ಸಾಕ್ಷಿಯ ಹೆಸರು | : | ಕೆ.ಎ. ದೇವಯ್ಯ |
| ತಂದೆಯ ಹೆಸರು | : | ಲೇಟ್. ಕೆ.ಎಂ.ಅಯ್ಯಪ್ಪ |
| ವಯಸ್ಸು | : | 42 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸಸ್ಥಳ | : | ಹೆಗ್ಗಳ ಗ್ರಾಮ |

**ದಿನಾಂಕ: 31.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ಸಾಕ್ಷಿಯು ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಕೃತ್ಯ ಸ್ಥಳದ ನಕಾಶೆಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ ದಾಖಲೆಗಳಿಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಮುಖ್ಯ ವಿಚಾರಣೆ : ಮುಕ್ತಾಯ**

**ಪಾಟೀ ಸವಾಲು: ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ದಿ:3.02.2015 ರಂದು ನಾನು ಮತ್ತು ಚಾಸಾ-3 ರವರು ಹೆಗ್ಗಳ ಗ್ರಾಮದಲ್ಲಿರುವಾ ಪೋಲಿಸರು ನಮ್ಮ ಹೆಗ್ಗಳ ಗ್ರಾಮದ ಟಿ.ಎ.ಪೊನ್ನಪ್ಪ ರವರ ಮನೆಯ ಮುಂಭಾಗದ ಮಣ್ಣು ರಸ್ತೆಗೆ ಬರುವಂತೆ ತಿಳಿಸಿ, ನಾವುಗಳು ಅಲ್ಲಿಗೆ ಹೋದಾಗ ಪೋಲಿಸರು ಈ ಪ್ರಕರಣದ ವಿಚಾರವನ್ನು ತಿಳಿಸಿ, ಮಹಜರು ಸಮಯದಲ್ಲಿ ಪಂಚರಾಗಬೇಕೆಂದು

ಕೋರಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು, ಸದರಿ ಕೃತ್ಯ ಸ್ಥಳದಲ್ಲಿ ಚಾಸಾ-1 ಮತ್ತು 2 ರವರು ಹಾಜರಿದ್ದು,ಚಾಸಾ-1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನಮ್ಮ ಸಮಕ್ಷಮ ಮಹಜರು ಕ್ರಮವನ್ನು ಜರುರಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರವರು ಕೃತ್ಯ ಸ್ಥಳದಲ್ಲಿ ಬಿದ್ದಿದ್ದ ಒಂದು ಕಬ್ಬಿಣದ ಕತ್ತಿಯನ್ನು ತೆಗೆದು, ಇದೇ ಕತ್ತಿ ಚಾಸಾ-1 ರವರಿಗೆ ತೋರಿಸಿ, ಕೊಲೆ ಬೆದರಿಕೆ ಹಾಕಿರುವುದಾಗಿ ಹೇಳಿ ತೆಗೆದು ಹಾಜರುಪಡಿಸಿದ ಮೇರೆಗೆ ಸದರಿ ಕತ್ತಿಯನ್ನು ಪೋಲಿಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ತಯಾರಿಸಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಮುಕ್ತಾಯ**

**ಮರು ವಿಚಾರಣೆ ಃ ಇಲ್ಲ**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

ಪ್ರದೀಪ ಪೋತದಾರ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ

# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂಃ325/2015**

ಸಿಡಬ್ಲ್ಯುಃ3
ಪಿಡಬ್ಲ್ಯುಃ3

| | | |
|---|---|---|
| ಸಾಕ್ಷಿಯ ಹೆಸರು | ಃ | ಕೆ.ಕೆ.ಜಾಯ್ |
| ತಂದೆಯ ಹೆಸರು | ಃ | ಕೆ.ಜೆ.ಕೋರಾ |
| ವಯಸ್ಸು | ಃ | 49 ವರ್ಷ |
| ವೃತ್ತಿ | ಃ | ಆಟೋ ಚಾಲಕ |
| ವಾಸಸ್ಥಳ | ಃ | ಹೆಗ್ಗಳ ಗ್ರಾಮ |

**ದಿನಾಂಕಃ 31.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ಸಾಕ್ಷಿಯು ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಕೃತ್ಯ ಸ್ಥಳದ ನಕಾಶೆಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ ದಾಖಲೆಗಳಿಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಮುಖ್ಯ ವಿಚಾರಣೆ ಃ ಮುಕ್ತಾಯ**

**ಪಾಟೀ ಸವಾಲುಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ದಿಃ3.02.2015 ರಂದು ನಾನು ಮತ್ತು ಚಾಸಾ-4 ರವರು ಹೆಗ್ಗಳ ಗ್ರಾಮದಲ್ಲಿರುವಾಗ ಪೋಲಿಸರು ನಮ್ಮ ಹೆಗ್ಗಳ ಗ್ರಾಮದ ಟಿ.ಎ.ಪೊನ್ನಪ್ಪ ರವರ ಮನೆಯ ಮುಂಭಾಗದ ಮಣ್ಣು ರಸ್ತೆಗೆ ಬರುವಂತೆ ತಿಳಿಸಿ, ನಾವುಗಳು ಅಲ್ಲಿಗೆ ಹೋದಾಗ ಪೋಲಿಸರು ಈ

ಪ್ರಕರಣದ ವಿಚಾರವನ್ನು ತಿಳಿಸಿ, ಮಹಜರು ಸಮಯದಲ್ಲಿ ಪಂಚರಾಗಬೇಕೆಂದು ಕೋರಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು, ಸದರಿ ಕೃತ್ಯ ಸ್ಥಳದಲ್ಲಿ ಚಾಸಾ-1 ಮತ್ತು 2 ರವರು ಹಾಜರಿದ್ದು, ಚಾಸಾ-1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನಮ್ಮ ಸಮಕ್ಷಮ ಮಹಜರು ಕ್ರಮವನ್ನು ಜರುರಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರವರು ಕೃತ್ಯ ಸ್ಥಳದಲ್ಲಿ ಬಿದ್ದಿದ್ದ ಒಂದು ಕಬ್ಬಿಣದ ಕತ್ತಿಯನ್ನು ತೆಗೆದು, ಇದೇ ಕತ್ತಿ ಚಾಸಾ-1 ರವರಿಗೆ ತೋರಿಸಿ, ಕೊಲೆ ಬೆದರಿಕೆ ಹಾಕಿರುವುದಾಗಿ ಹೇಳಿ ತೆಗೆದು ಹಾಜರುಪಡಿಸಿದ ಮೇರೆಗೆ ಸದರಿ ಕತ್ತಿಯನ್ನು ಪೋಲಿಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ತಯಾರಿಸಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಮುಕ್ತಾಯ**

**ಮರು ವಿಚಾರಣೆ ಃ ಇಲ್ಲ**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

ಪ್ರದೀಪ ಪೋತದಾರ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ